# **3 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು.**

ಉಪಸ್ಥಿತರು :- ಶ್ರೀ **ಕಿರಣ್ ಎಸ್.ಪಿ.,** ಬಿ.ಬಿ.ಎಂ., ಎಲ್.ಎಲ್.ಬಿ.,
3 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

**ದಿನಾಂಕ 18 ನೇ ಜೂನ್ 2024**

**ಅಸಲು ದಾವಾ ಸಂಖ್ಯೆ: 216/2018**

ವಾದಿ **:-** ತನುಜ ವಿ.ಪಿ.

**ವಿರುದ್ಧ**

ಪ್ರತಿವಾದಿಗಳು **:-** ಪುಟ್ಟಸ್ವಾಮಿ ಮತ್ತು ಇತರರು

**ಮಧ್ಯಕಾಲೀನ ಅರ್ಜಿ ಸಂಖ್ಯೆ-31**

ಅರ್ಜಿದಾರರು **:-** ಶೀನಿವಾಸ ವಿ.ಪಿ.

(ಪ್ರತಿನಿಧಿಸುವವರು ಶ್ರೀ. ಬಿ ಎ ಜಿ ವಕೀಲರು)

**ವಿರುದ್ಧ**

ಎದುರುದಾರರು **:-** ಮನೋಜ್ ಕೆ ಎನ್ ಮತ್ತು ದರ್ಶನ್ ಗೌಡ ಕೆ ಎನ್

(ಪ್ರತಿನಿಧಿಸುವವರು ಶ್ರೀ ಹೆಚ್ ಎಂ ವಕೀಲರು)

ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ **1** ನಿಯಮ **10 (2)** ಸಹವಾಚಕ ಕಲಂ **151** ರ ಮಧ್ಯಕಾಲೀನ ಅರ್ಜಿ ಸಂಖ್ಯೆ **31** ರ ಮೇಲಿನ ಆದೇಶ

2 ನೇ ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 31 ನ್ನು ಸಲ್ಲಿಸಿ, ಅರ್ಜಿಯ ಅನುಸೂಚಿಯಲ್ಲಿ ನಮೂದಿಸಿರುವ ಪ್ರಸ್ತಾಪಿತ ವ್ಯಕ್ತಿಗಳನ್ನು ಈ ದಾವೆಯ 5 ಮತ್ತು 6 ನೇ ಪ್ರತಿವಾದಿಯರನ್ನಾಗಿ ಸೇರ್ಪಡೆ ಮಾಡಬೇಕೆಂದು ಕೋರಿ ಈ

ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಅರ್ಜಿದಾರರು ತಮ್ಮ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವುದೇನೆಂದರೆ, ತನ್ನ ಹಾಗೂ 1, 3 ಮತ್ತು 4 ನೇ ಪ್ರತಿವಾದಿಗಳ ವಿರುದ್ಧ ವಾದಿಯು ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಗೆ ಸಂಬಂಧಿಸಿದಂತೆ ಮನೋಜ್ ಕೆ ಎನ್ ಬಿನ್ ನಾರಾಯಣ ಮತ್ತು ದರ್ಶನ್ ಗೌಡ ಕೆ ಎನ್ ಬಿನ್ ನಾರಾಯಣ ರವರು ದಾವಾ ಷೆಡ್ಯೂಲ್ ಸ್ವತ್ತು 2 ನ್ನು ದಾನ ಪತ್ರದ ಮೂಲಕ ದಿನಾಂಕ 20-12-2022 ರಂದು 1 ನೇ ಪುಸ್ತಕ ಎಂ ಡಿ ಆರ್-1-09418-2022-23, ಸಿಡಿ ಎಂ ಡಿ ಆರ್ ಡಿ 1186 ರಂತೆ ಮದ್ದೂರು ಉಪ ನೋಂದಣಾಧಿಕಾರಿಯವರುಗಳ ಮುಂದೆ ದಾನ ಪತ್ರವನ್ನು ಮಾಡಿಸಿಕೊಂಡು, ದಾನ ಪತ್ರದಂತೆ ಖಾತೆ ಮಾಡಿಕೊಂಡಿರುತ್ತಾರೆ. ಆದ್ದರಿಂದ ಸದರಿಯವರನ್ನು 5 ಮತ್ತು 6 ನೇ ಪ್ರತಿವಾದಿಗಳನ್ನಾಗಿ ಸೇರ್ಪಡೆ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಮುಂದುವರಿದು ತನ್ನ ಅರ್ಜಿಯನ್ನು ಪುರಸ್ಕರಿಸಿದರೆ, ಇತರೆ ಪ್ರತಿವಾದಿ ಸಂಖ್ಯೆ 1, 3 ಹಾಗೂ 4 ರವರಿಗಾಗಲೀ ಅಥವಾ ವಾದಿಗಾಗಲೀ ಯಾವುದೇ ರೀತಿಯ ತೊಂದರೆ ಮತ್ತು ನಷ್ಟ ಸಂಭವಿಸುವುದಿಲ್ಲ. ಒಂದು ವೇಳೆ ತನ್ನ ಅರ್ಜಿಯನ್ನು ಪುರಸ್ಕರಿಸದೇ ಹೋದರೆ ತನಗೆ ತುಂಬಲಾರದ ನಷ್ಟ ಮತ್ತು ಹಾನಿ ಸಂಭವಿಸುತ್ತದೆ. ಆದ್ದರಿಂದ ತಾನು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ, ಆದೇಶವನ್ನು ನೀಡಬೇಕೆಂದು ನ್ಯಾಯ ಮತ್ತು ಸಮಾನತೆ ದೃಷ್ಠಿಯಿಂದ ಪ್ರಾರ್ಥಿಕೊಂಡಿರುತ್ತಾರೆ.

**3.** ಪ್ರಸ್ತಾಪಿತ ಪ್ರತಿವಾದಿಯರಿಗೆ ಮಧ್ಯಕಾಲೀನ ಅರ್ಜಿ ಸಂಖ್ಯೆ 31 ರ ಮೇಲಿನ ನೋಟೀಸ್ ಕಳುಹಿಸಲಾಗಿದ್ದು, ನೋಟೀಸ್ ಜಾರಿಯಾದ ನಂತರ ಪ್ರಸ್ತಾಪಿತ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಮಧ್ಯಕಾಲೀನ ಅರ್ಜಿ ಸಂಖ್ಯೆ 31 ಕ್ಕೆ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ಹೇಳಿರುವುದೇನೆಂದರೆ, 2 ನೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯು ಕಾನೂನು ಪ್ರಕಾರ ಪ್ರತಿವಾದಿಯರು ಬೇರೆಯವರನ್ನು ದಾವೆಗೆ ಸೇರ್ಪಡೆಗೊಳಿಸುವಂತಿಲ್ಲ, ಅದು ಕಾನೂನು ವಿರೋಧಿ ಕ್ರಮವಾಗಿರುತ್ತದೆ. ಯಾವುದೇ ದಾವೆಯಲ್ಲಿ ವಾದಿಗೆ ಮಾತ್ರ ಅವಶ್ಯಕ ಪಕ್ಷಗಾರರನ್ನು ದಾವೆಯಲ್ಲಿ ಸೇರ್ಪಡೆಗೊಳಿಸುವ ಅಧಿಕಾರವಿರುತ್ತದೆ ಅಥವಾ ಅಬಾಧಿತರು ಹಾಗೂ ಆಸ್ತಿಯಲ್ಲಿ ಹಕ್ಕು, ಹಿತಾಸಕ್ತಿ

ಹೊಂದಿರುವವರು ಮಾತ್ರ ತಮ್ಮನ್ನು ಪಕ್ಷಗಾರರನ್ನಾಗಿ ಮಾಡಿಕೊಳ್ಳುವಂತೆ ಅರ್ಜಿ ಸಲ್ಲಿಸಬಹುದಾಗಿದೆ. ಆದಕಾರಣ ಈ ಅರ್ಜಿಯು ಕಾನೂನು ಬಾಹಿರವಾದುದ್ದಾಗಿರುತ್ತದೆ. ದಾವಾ ಷೆಡ್ಯೂಲ್ 2 ನೇ ಸ್ವತ್ತು ಈ ಉದ್ದೇಶಿತ ಪ್ರತಿವಾದಿಗಳಿಗೆ ದಾನವಾಗಿ ಬಂದಿರುವುದಿಲ್ಲ. ಆದರೆ ದಾವಾ ಷೆಡ್ಯೂಲ್ 3 ನೇ ಸ್ವತ್ತು ಈ ಉದ್ದೇಶಿತ ಪ್ರತಿವಾದಿಗಳ ತಾತ 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದ್ದು , 1 ನೇ ಪ್ರತಿವಾದಿಯ ಯೋಗಕ್ಷೇಮ, ಆರೋಗ್ಯ, ಪಾಲನೆ, ಪೋಷಣೆ, ಶುಶ್ರೂಷೆ ಇವುಗಳನ್ನು ಉದ್ದೇಶಿತ ಪ್ರತಿವಾದಿಗಳು ನೋಡಿಕೊಳ್ಳುತ್ತಿದ್ದ ಕಾರಣ ಅವರಿಗೆ ದಾನವಾಗಿ ನೀಡಿರುತ್ತಾರೆ. ಅದನ್ನು ಪ್ರಶ್ನಿಸುವ ಹಕ್ಕು ವಾದಿಗಾಗಲೀ ಅಥವಾ ಇತರೆ ಪ್ರತಿವಾದಿಗಾಗಲೀ ಇರುವುದಿಲ್ಲ. ಮೇಲ್ಕಂಡ ಕಾರಣಗಳಿಗಾಗಿ ಉದ್ದೇಶಿತ ಪ್ರತಿವಾದಿಗಳು ಈ ದಾವೆಗೆ ಅವಶ್ಯಕ ಪಕ್ಷಗಾರರಾಗಿರುವುದಿಲ್ಲ. ಆದ್ದರಿಂದ ಈ ಅರ್ಜಿಯು ಕಾನೂನು ಪ್ರಕಾರ ಉರ್ಜಿತವಾದುದ್ದಲ್ಲವಾದ್ದರಿಂದ ಖರ್ಚು ಸಮೇತ ವಜಾಗೊಳಿಸುವ ಆದೇಶವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಿದ ನಂತರ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

**1.** ಪ್ರಸ್ತಾಪಿತ ಪ್ರತಿವಾದಿಯರನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರೆಂದು **2** ನೇ ಪ್ರತಿವಾದಿಯು ತೋರ್ಪಡಿಸಿದ್ದಾರೆಯೇ **?**

**2.** ಯಾವ ಆದೇಶ **?**

**5.** ಇಬ್ಬರು ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿರುವ ದಾಖಲಾತಿಗಳನ್ನು ಕೂಲಕುಂಷವಾಗಿ ಪರಿಶೀಲಿಸಲಾಯಿತು. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ **1 :** ಸಕಾರಾತ್ಮಕವಾಗಿ,
ಅಂಶ **2 :** ಈ ಕೆಳಕಂಡ ಕಾರಣಗಳಿಗಾಗಿ,
ಅಂತಿಮ ಆದೇಶದಂತೆ,

## ಕಾರಣಗಳು

**6. ಅಂಶ 1 :-** ವಾದಿಯು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಭಾಗಾಂಶ ಕೋರಿ ದಾವಾ ಸಲ್ಲಿಸಿರುತ್ತಾರೆ. ಈ ಮೇಲ್ಕಂಡ ದಾವಾದಲ್ಲಿ ವಾದಿಯ ಪರ ವಿಚಾರಣೆಗೆಂದು ಇರುವ ಸಮಯದಲ್ಲಿ 2 ನೇ ಪ್ರತಿವಾದಿ ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿದ್ದು, ದಾವಾ ಅನುಸೂಚಿ 2 ರ ಆಸ್ತಿಯನ್ನು ಪ್ರಸ್ತಾಪಿತ ಪ್ರವಾದಿಯರು ದಿನಾಂಕ 20-12-2022 ರಂತೆ ದಾನ ಪತ್ರದ ಮೂಲಕ ಪಡೆದಿದ್ದು, ದಾನ ಪತ್ರದಂತೆ ಖಾತೆಯಾಗಿರುತ್ತದೆ. ಆದ್ದರಿಂದ ಪ್ರಸ್ತಾಪಿತ ಪ್ರತಿವಾದಿಯರು ಅವಶ್ಯಕ ಪಕ್ಷಗಾರರಾಗಿರುವುದರಿಂದ ಅವರನ್ನು ಈ ದಾವಾದಲ್ಲಿ 5 ಮತ್ತು 6 ನೇ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

7. ಪ್ರಸ್ತಾಪಿತ ಪ್ರತಿವಾದಿಯರು ಹೇಳುವುದೇನೆಂದರೆ, ದಾವಾ ಆಸ್ತಿ 3 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದ್ದು, 1 ನೇ ಪ್ರತಿವಾದಿಯು ಪ್ರಸ್ತಾಪಿತ ಪ್ರತಿವಾದಿಯರ ತಾತನಾಗಿದ್ದು, ಅವರು 1 ನೇ ಪ್ರತಿವಾದಿಯ ಯೋಗಕ್ಷೇಮ, ಆರೋಗ್ಯ, ಪಾಲನೆ, ಪೋಷಣೆ, ಶುಶ್ರೂಷೆ ಮಾಡುತ್ತಿದ್ದರಿಂದ ಅವರಿಗೆ ದಾನವಾಗಿ ನೀಡಿರುತ್ತಾರೆಂಬುದು ಪ್ರಸ್ತಾಪಿತ ಪ್ರತಿವಾದಿಯರ ನಿಲುವಾಗಿರುತ್ತದೆ. ಪ್ರಸ್ತಾಪಿತ ಪ್ರತಿವಾದಿಯರು ಹೇಳಿದಂತೆ ದಾವಾ ಅನುಸೂಚಿ 3 ರ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯೋ ಅಥವಾ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಯೋ ಎಂಬುದನ್ನು ಈ ಹಂತದಲ್ಲಿ ಪರಿಗಣಿಸುವುದು ಸೂಕ್ತವಾಗಿರುವುದಿಲ್ಲ ಮತ್ತು ಸದರಿ ವಿಚಾರವನ್ನು ಪೂರ್ಣ ವಿಚಾರಣೆಯ ನಂತರ ತಿಳಿಯಬೇಕಾಗಿರುತ್ತದೆ.

8. ಪ್ರಸ್ತಾಪಿತ ಪ್ರತಿವಾದಿಯರು ಮುಂದುವರೆದು ಹೇಳುವುದೇನೆಂದರೆ, ಯಾವುದೇ ದಾವೆಯಲ್ಲಿ ವಾದಿಗೆ ಮಾತ್ರ ಅವಶ್ಯಕ ಪಕ್ಷಗಾರರನ್ನು ದಾವೆಯಲ್ಲಿ ಸೇರ್ಪಡೆಗೊಳಿಸುವ ಅಧಿಕಾರವಿರುತ್ತದೆ ಅಥವಾ ಅಬಾಧಿತರು ಹಾಗೂ ಆಸ್ತಿಯಲ್ಲಿ ಹಕ್ಕು, ಹಿತಾಸಕ್ತಿ ಹೊಂದಿರುವವರು ಮಾತ್ರ ತನ್ನನ್ನು ಪಕ್ಷಗಾರರನ್ನಾಗಿ ಮಾಡಿಕೊಳ್ಳುವಂತೆ ಅರ್ಜಿ ಸಲ್ಲಿಸಬಹುದಾಗಿದೆ ಎಂಬುದು ಪ್ರಸ್ತಾಪಿತ ಪ್ರತಿವಾದಿಯರ ನಿಲುವಾಗಿರುತ್ತದೆ. ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 1 ನಿಯಮ 10(2) ನ್ನು ಗಮನಿಸಿದಾಗ, ಯಾವುದೇ ಪಕ್ಷಗಾರನ ಅರ್ಜಿಯ ಮೇಲೆ ಅಥವಾ ಅದಲ್ಲದೇ ನ್ಯಾಯಾಲಯಕ್ಕೆ ನ್ಯಾಯೋಚಿತವೆಂದು ತೋರಬಹುದಾದಂಥ ನಿಬಂಧನೆಗಳ ಮೇಲೆ ವಾದಿ ಅಥವಾ

ಪ್ರತಿವಾದಿಯನ್ನು ಸೇರ್ಪಡೆಗೊಳಿಸಬಹುದಾಗಿರುತ್ತದೆ. ಪ್ರಸ್ತಾಪಿತ ಪ್ರತಿವಾದಿಯರು ಹೇಳಿದಂತೆ ಕೇವಲ ವಾದಿ ಅಥವಾ ಅಬಾಧಿತರ ಅರ್ಜಿಯ ಮೇಲೆ ಮಾತ್ರ ಪಕ್ಷಗಾರರನ್ನು ಸೇರ್ಪಡೆ ಮಬಹುದು ಎಂದು ದಿವಾಣಿ ಪ್ರಕ್ರಿಯಾ ಸಂಹಿತೆಯ ಯಾವುದೇ ಅನುಬಂಧದಲ್ಲಿ ಹೇಳಿರುವುದಿಲ್ಲ.

9. ಪ್ರಸ್ತಾಪಿತ ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ತಮ್ಮ ಹೆಸರಿಗೆ 1 ನೇ ಪ್ರತಿವಾದಿಯರು ದಾವಾ ಅನುಸೂಚಿ 3 ರ ಆಸ್ತಿಯನ್ನು ದಾನ ಪತ್ರ ಮಾಡಿರುತ್ತಾರೆಂಬುದನ್ನು ಒಪ್ಪಿಕೊಂಡಿರುತ್ತಾರೆ. ದಾವಾ ಅನುಸೂಚಿ 3 ರ ಆಸ್ತಿ ಒಟ್ಟು ಕುಟುಂಬ ಅಥವಾ ಪಿತ್ರಾರ್ಜಿತ ಆಸ್ತಿಯೋ, ಅಲ್ಲವೋ ಎಂಬುದನ್ನು ಪೂರ್ಣ ವಿಚಾರಣೆಯ ನಂತರ ತಿಳಿಯಬೇಕಾಗಿರುತ್ತದೆ. ಒಂದು ವೇಳೆ ಪ್ರಸ್ತಾಪಿತ ಪ್ರತಿವಾದಿಯರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡದೇ ಇದ್ದರೇ, ತಮ್ಮಗಳ ಹೆಸರಿಗೆ ದಾವಾ ಅನುಸೂಚಿ 3 ರ ಸ್ವತ್ತಿಗೆ ಸಂಬಂಧಿಸಿದಂತೆ ದಾನಪತ್ರ ಆಗಿರುವುದರಿಂದ, ಮುಂದೆ ಮತ್ತೊಂದು ದಾವಾಕ್ಕೆ ಮುನ್ನುಡಿ ಮಾಡಿಕೊಟ್ಟಂತಾಗುತ್ತದೆ. ಪ್ರಸ್ತಾಪಿತ ಪ್ರತಿವಾದಿಯರ ಅನುಪಸ್ಥಿತಿಯಲ್ಲಿ ಪರಿಣಾಮಕಾರಿ ಡಿಕ್ರಿಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಪ್ರಸ್ತಾಪಿತ ಪ್ರತಿವಾದಿಯರನ್ನು ಈ ದಾವಾದಲ್ಲಿ ಸೇರ್ಪಡೆ ಮಾಡುವುದರಿಂದ ಅವರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಮತ್ತು ಅವರಿಗೂ ಕೂಡ ದಾವಾದಲ್ಲಿ ಕಾನೂನಾತ್ಮಕವಾಗಿ ಹೋರಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಒಂದು ವೇಳೆ ಪ್ರಸ್ತಾಪಿತ ಪ್ರತಿವಾದಿಯರನ್ನು ಈ ದಾವಾದಲ್ಲಿ ಸೇರ್ಪಡೆ ಮಾಡದೇ ಇದ್ದರೆ , 2 ನೇ ಪ್ರತಿವಾದಿ ಹಾಗೂ ಇತರ ಪಕ್ಷಗಾರರಿಗೆ ತುಂಬಲಾರದ ನಷ್ಟವುಂಟಾಗುವ ಸಾಧ್ಯತೆ ಇರುತ್ತದೆ. ಒಟ್ಟಾರೆಯಾಗಿ ಗಮನಿಸಿದಾಗ, ಪ್ರಸ್ತಾಪಿತ ಪ್ರತಿವಾದಿಯರ ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಈ ಮೇಲೆ ಹೇಳಿದ ಕಾರಣಗಳಿಗಾಗಿ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**10**<u>. ಅಂಶ ನಂಃ **2:-**</u> ಮೇಲ್ಕಂಡ ಅಂಶ 1 ರಲ್ಲಿ ಚರ್ಚಿಸಲಾದಂತೆ ಈ ಕೆಳಕಂಡ:

## <u>ಆದೇಶ</u>

2 ನೇ ಪ್ರತಿವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ

ಸಂತೆಯ ಕ್ರಮಾದೇಶ 1 ನಿಯಮ 10(2) ಸಹವಾಚಕ 151 ರ ಮಧ್ಯಕಾಲೀನ ಅರ್ಜಿ 31 ನ್ನು ಪುರಸ್ಕರಿಸಲಾಯಿತು.

ದಾವಾ ಶಿರೋನಾಮೆಯಲ್ಲಿ ಸೂಕ್ತ ತಿದ್ದುಪಡಿ ಮಾಡಿ ಪ್ರಸ್ತಾಪಿತ ಪ್ರತಿವಾದಿಯರನ್ನು 5 ಮತ್ತು 6 ನೇ ಪ್ರತಿವಾದಿಯರನ್ನಾಗಿ ಸೇರ್ಪಡೆ ಮಾಡುವಂತೆ ವಾದಿಗೆ ನಿರ್ದೇಶಿಸಲಾಯಿತು.

ಖರ್ಚುಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **18** ನೇ ಜೂನ್ **2024** ರಂದು ಘೋಷಿಸಲಾಯಿತು)

( ಕಿರಣ್ ಎಸ್.ಪಿ)
3 ನೇ ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.